Doddankatte Project in Bukinakere Hobli

77. Sri M. K. BOMME GOWDA (K. R. Pet).—(2-12-1968)

Will the Minister of State for Minor Irrigation, be pleased to state :—

(*a*) the amount spent so far, for the construction of Doddanakatte Project in Bukinakere Hobli, K. R. Pet Taluk in Mandya District ;

(*b*) whether it is a fact that although the above project was sanctioned and completed some fifteen years ago the area under its atchkat has not been brought under irrigation ?

Sri D. PARAMESWARAPPA (Deputy Minister for Major Irrigation and Electricity) [On behalf of SRI A. J. DODDAMETI (Minister of State for Minor Irrigation)].—

(*a*) Rs. 9,28,478.

(*b*) The work was completed during 1963-64 and water allowed during 1964-65. Owing to scarcity conditions in this area the yield during the past few years was low, hence the contemplated atchkat could not be fully developed.

ಶ್ರೀ ಎಂ. ಕೆ. ಬೊಮ್ಮೇಗೌಡ.—63-64ರಲ್ಲಿ ಈ ಕೆಲಸವನ್ನು ಪೂರೈಸಿದೆ ಎಂದು ಉತ್ತರದಲ್ಲಿ ಹೇಳಿದೆ. ಈ ಕೆಲಸ ಪುರು ಯಾವಾಗ ಆಯಿತು ?

† ಶ್ರೀ ಡಿ. ಪರಮೇಶ್ವರಪ್ಪ.—ಈ ಕೆರೆಯ ಕೆಲಸ 55-56ರಲ್ಲಿ ಪ್ರಾರಂಭವಾಯಿತು.

ಶ್ರೀ ಎಂ. ಕೆ. ಬೊಮ್ಮೇಗೌಡ.—ಅಲ್ಲಿಂದೀಚೆಗೆ ಮಳೆಯಾಗಲಿಲ್ಲವೆಂದು ಹೇಳಿದ್ದೀರಿ. ಅದು ನಿಜ. ಅಲ್ಲಿಂದೀಚೆಗೆ 9 ಲಕ್ಷ 28 ಸಾವಿರ ಚಿಲ್ಲರೆ ರೂಪಾಯಿಗಳು ಖರ್ಚಾಗಿದೆಂಬುದಾಗಿ ಉತ್ತರದಲ್ಲಿ ಹೇಳಿದೆ. ಡ್ಯಾಮ್ ಏರಿಯಾದಲ್ಲಿ ಇಷ್ಟು ದುಡ್ಡು ಖರ್ಚು ಮಾಡಿದ್ದರೂ ಅದು ಉಪಯೋಗಕ್ಕೆ ಬಾರದೆ ಇರುವುದರಿಂದ ನ್ಯಾಷನಲ್ ವೆರ್ಸ್ಟ್ ವೇಸ್ಟ್ ಆಗುವುದಿಲ್ಲವೇ ? ಇದರ ಬಗ್ಗೆ ಏನಾದರೂ ಆಲೋಚನೆ ಮಾಡಿದ್ದೀರಾ ?

ಶ್ರೀ ಡಿ. ಪರಮೇಶ್ವರಪ್ಪ.—ಈ ಮೈನರ್ ಇರ್ರಿಗೇಷನ್ ಕೆರೆಗಳನ್ನು ಒಂದು ಸದುದ್ದೇಶದಿಂದ ಕಟ್ಟುತ್ತೇವೆ. ಆದರೆ ಮಾನ್ಯ ಸದಸ್ಯರು ಒಂದು ವಿಷಯವನ್ನು ಗಮನದಲ್ಲಿಟ್ಟುಕೊಳ್ಳಬೇಕು. ಇಂತಹ ಕೆರೆಗಳಲ್ಲಿ ನೀರು ಇರಬೇಕಾದರೆ ಮಳೆ ಸಕಾಲಕ್ಕೆ ಬರಬೇಕು. ಇಲ್ಲದೇ ಹೋದರೆ ಯಾವುದಾದರೂ ಒಂದು ಪೆರಿನಿಯಲ್ ಸೋರ್ಸ್ ಇರಬೇಕು. ಇದಕ್ಕೆ ಅಂತಹ ಅವಕಾಶವಿಲ್ಲ. ಆದ್ದರಿಂದ ಇದು ಮಳೆಯ ಆಧಾರದ ಮೇಲೆ ನಿಂತಿದೆ. ಮಳೆ ಸಕಾಲಕ್ಕೆ ಆದರೆ ಕೆರೆ ತುಂಬುತ್ತದೆ, ನೀರಾವರಿಗೆ ಅನುಕೂಲವಾಗುತ್ತದೆ.

ಶ್ರೀ ಎಂ. ಕೆ ಬೊಮ್ಮೇಗೌಡ.—ಏಕಪ್ಪನ್ನು ಯಾವುದೋ ಒಂದು ಹಳ್ಳಕ್ಕೆ ಹಾಕಿದರೆ ಅದರಿಂದೇನೂ ಪ್ರಯೋಜನವಾಗುವುದಿಲ್ಲ. ಮುಂದಗೆರೆ ಹಳ್ಳಕ್ಕೆ ಕನೆಕ್ಷನ್ ಕೊಟ್ಟರೆ ಅದರಿಂದೇನಾದರೂ ಅನುಕೂಲವಾಗುತ್ತದೆ. ಇದರಿಂದ ಜನಗಳಿಗೂ ಒಳ್ಳೆಯದಾಗುತ್ತದೆಂದು ನಾನು ತಿಳಿದುಕೊಂಡಿದ್ದೇನೆ. ಕೆಲವು ಅಧಿಕಾರಿಗಳಿಂದಲೂ ಅದೇ ರೀತಿ ವರದಿಗಳು ಬರುತ್ತಿವೆ. ಈಗ ಈ ಕಾಮಗಾರಿಯನ್ನು ಮಾಡದೇ ಹೋದರೆ, ಖರ್ಚಾಗಿರುವ ಸುಮಾರು 10 ಲಕ್ಷ ರೂಪಾಯಿಗಳು ನ್ಯಾಷನಲ್ ವೆರ್ಸ್ಟ್ ವೇಸ್ಟ್ ಆಗುತ್ತದಲ್ಲವೇ ?

ಶ್ರೀ ಡಿ. ಪರಮೇಶ್ವರಪ್ಪ.—ಈ ಸಲಹೆ ಈಗ ಹೊಸದಾಗಿ ಬಂದಿದೆ. ಮಾನ್ಯ ಸದಸ್ಯರು ಕೊಟ್ಟಿರತಕ್ಕ ಸಲಹೆಯನ್ನು ಪರಿಶೀಲನೆ ಮಾಡಿಸಿ, ಅದಷ್ಟು ಬೇಗ ಅದನ್ನು ಸರಿಪಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.